ಕ್ರ ಸಂ	ಜಿಲ್ಲೆಯ ಹೆಸರು	ರೈತರ ಸಂಖ್ಯೆ	ಅಸಲು	ಬಡ್ಡಿ	ಒಟ್ಟು
25	ಬೆಳಗಾವಿ	235700	57221.34	6009.24	63230.58
26	ಬಳ್ಳಾರಿ	37988	8298.42	871.33	9169.75
27	ದಾವಣಗೆರೆ	56379	10718.88	1125.48	11844.36
28	ಹಾಸನ	64188	14128.45	1483.49	15611.94
29	ಬೀದರ್	118587	20582.72	2161.19	22743.91
30	ಉತ್ತರ ಕನ್ನಡ	50910	9658.80	1014.18	10672.98
	ಒಟ್ಟು	**1524495**	**328447.13**	**34591.87**	**363039.00**

ಮಂಗಳಾ ಕ್ರೀಡಾಂಗಣದ ಅಭಿವೃದ್ಧಿ
225 (356)

ಶ್ರೀ ಖಾದರ್ ಯು.ಟಿ (ಮಂಗಳೂರು)

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ "ಮಂಗಳಾ ಕ್ರೀಡಾಂಗಣದ" ಅಭಿವೃದ್ಧಿಗೆ ಸರ್ಕಾರವು ಮಂಜೂರು ಮಾಡಿದ ಹಣವೆಷ್ಟು?

ಆ) ಈ ಹಣದಲ್ಲಿ ಇದುವರೆಗೂ ಖರ್ಚು ಮಾಡಲಾದ ಹಣವೆಷ್ಟು?

ಇ) ಈ ಕ್ರೀಡಾಂಗಣದ ಕಾಮಗಾರಿಗಳು ವಿಳಂಬ ಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಇರುವ ತೊಂದರೆಗಳೇನು?

ಉ) ಕಾಮಗಾರಿಯನ್ನು ಯಾವಾಗ ಪೂರ್ಣ ಗೊಳಿಸಲಾಗುವುದು?

ಶ್ರೀ ಎಂ.ಪಿ ಅಪ್ಪಚ್ಚು ರಂಜನ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು)

ಅ) ಮಂಗಳೂರಿನ ಮಂಗಳಾ ಕ್ರೀಡಾಂಗಣದ ಅಭಿವೃದ್ಧಿಗೆ ಒಟ್ಟು ರೂ. 467.97 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ಆ) ಈ ಹಣದಲ್ಲಿ ಇದುವರೆಗೆ ಖರ್ಚು ಮಾಡಲಾದ ಮೊತ್ತ ರೂ.407.82 ಲಕ್ಷಗಳು

ಇ) ಸಿಂಥೆಟಿಕ್ ಟ್ರ್ಯಾಕ್ ಕಾಮಗಾರಿಯನ್ನುಳಿದು, ಉಳಿದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ) ಸಿಂಥೆಟಿಕ್ ಟ್ರ್ಯಾಕ್ ಕಾಮಗಾರಿ ಪ್ರಗತಿಯಲ್ಲಿದ್ದು, ದಿನಾಂಕ: 17–06–2012 ರಂದು ಪೂರ್ಣಗೊಳಿಸಬೇಕಾಗಿತ್ತು. ಕರಾವಳಿ ಪ್ರದೇಶವಾಗಿರುವುದರಿಂದ ಮಳೆಗಾಲ ಪ್ರಾರಂಭಗೊಂಡಿರುವುದರಿಂದ ಸಿಂಥೆಟಿಕ್ ಕಾಮಗಾರಿಯನ್ನು ಮಳೆಗಾಲದಲ್ಲಿ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು.

ಉ) ಸಿಂಥೆಟಿಕ್ ಟ್ರ್ಯಾಕ್ ಕಾಮಗಾರಿಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು.

ಮೂಲಸೌಲಭ್ಯಗಳ ಕೊರತೆ

202 (295)

ಶ್ರೀ ಡಾ: ಮಾಲಕ ರೆಡ್ಡಿ

ಅ) ಯಾದಗಿರಿ ನಗರ ಹೊಸ ಜಿಲ್ಲಾ ಕೇಂದ್ರವಾಗಿದ್ದು, ಈ ನಗರದ ಬಹುತೇಕ ಬಡಾವಣೆಗಳು ಮೂಲಸೌಕರ್ಯದಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಯಾದಗಿರಿ ನಗರದ ಜಿಲ್ಲಾ ಕೇಂದ್ರದ ಹೊಸಳ್ಳಿ ಕ್ರಾಸ್, ಲಕ್ಷ್ಮೀನಗರ, ಬಸವೇಶ್ವರ ನಗರ, ಗಂಜ್ ಏರಿಯಾ ಸೇರಿದಂತೆ ಬಹುತೇಕ ಕಡೆಗಳಲ್ಲಿ ಕುಡಿಯುವ ನೀರು ಸರಬರಾಜು, ಒಳಚರಂಡಿ, ರಸ್ತೆ ಸೌಲಭ್ಯಗಳಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಜಾರಕಿಹೋಳಿ

(ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

ಅ) ಗಮನಕ್ಕೆ ಬಂದಿದೆ.

ಆ) ಮಾನ್ಯ ಮುಖ್ಯ ಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ (ಸಿಎಂಎಸ್ಎಂಟಿಡಿಪಿ) ಮೊದಲನೇ ಹಂತದ ಅನುದಾನದ ರೂ.30.00 ಕೋಟಿಗೆ ಯಾದಗಿರಿ ನಗರದ ಮುಖ್ಯ ರಸ್ತೆಗಳನ್ನು,